# ವಿಧಾನ ಪರಿಷತ್

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 548 (737) |
| ಸದಸ್ಯರ ಹೆಸರು | : | ಶ್ರೀ ಕೇಶವ ಪ್ರಸಾದ್. ಎಸ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 22.07.2024 |
| ಉತ್ತರಿಸುವವರು | : | ಮಾನ್ಯ ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಅರಣ್ಯ ಇಲಾಖೆಯಲ್ಲಿ ದಿನಾಂಕ: 24.02.1994ರವರೆಗೆ ಚಾಲ್ತಿಯಲ್ಲಿದ್ದ ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೇಮಕಾತಿ) ನಿಯಮಾವಳಿ, 1977ರ ನಿಯಮ 17(ಸಿ)ರನ್ವಯ ನೇರ ನೇಮಕಾತಿ ಹುದ್ದೆಗಳ ಎದುರಾಗಿ ತಾತ್ಕಾಲಿಕವಾಗಿ ದ್ವಿತೀಯ ದರ್ಜೆ ಸಹಾಯಕ ವೃಂದದಿಂದ ಪ್ರಥಮ ದರ್ಜೆ ಸಹಾಯಕರ ವೃಂದಕ್ಕೆ ಮುಂಬಡ್ತಿ ನೀಡಿ ಇವರನ್ನು ಪ್ರಥಮ ದರ್ಜೆ ಸಹಾಯಕ ವೃಂದದ ಜೇಷ್ಠತಾ ಪಟ್ಟಿಯಲ್ಲಿ ಸೇರ್ಪಡೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ನಿಯಮ 17(ಸಿ)ರನ್ವಯ ಎಷ್ಟು ದ್ವಿತೀಯ ದರ್ಜೆ ಸಹಾಯಕರಿಗೆ ಮುಂಬಡ್ತಿ ನೀಡಲಾಗಿದೆ; | ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977ರಲ್ಲಿ ಈ ಹಿಂದೆ ಅಸ್ತಿತ್ವದಲ್ಲಿದ್ದ ನಿಯಮ 17(ಸಿ)ರಡಿ *[ಸದರಿ ನಿಯಮವನ್ನು ದಿನಾಂಕ: 24.02.1994ರಿಂದ ತೆಗೆದು ಹಾಕಲಾಗಿರುತ್ತದೆ]* ದಿನಾಂಕ:27.04.1978 ರಿಂದ ದಿನಾಂಕ:24.02.1994 ರವರೆಗೆ ದ್ವಿತೀಯ ದರ್ಜೆ ಸಹಾಯಕ ವೃಂದದಿಂದ ಪ್ರಥಮ ದರ್ಜೆ ಸಹಾಯಕ ವೃಂದಕ್ಕೆ ನೀಡಲಾದ ಸ್ಥಾನಪನ್ನ (officiate) ಬಡ್ತಿಯನ್ನು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು) ರವರ ಕಛೇರಿಯ ಈ ಕೆಳಕಂಡ ಆದೇಶಗಳಲ್ಲಿ ನಿಯಮ 17(ಸಿ)ರ ನಿಯಮದಡಿ ಪ್ರಥಮ ದರ್ಜೆ ಸಹಾಯಕರ ವೃಂದಕ್ಕೆ ತಾತ್ಕಾಲಿಕವಾಗಿ ಸ್ಥಾನಪನ್ನ ಬಡ್ತಿಯನ್ನು ನೀಡಲಾಗಿದೆ:- |

| ಕ್ರ. ಸಂ. | ಮುಂಬಡ್ತಿ ಆದೇಶ ಸಂಖ್ಯೆ ಮತ್ತು ದಿನಾಂಕ | ಮುಂಬಡ್ತಿ ಪಡೆದ ಪ್ರಥಮ ದರ್ಜೆ ಸಹಾಯಕರ ಸಂಖ್ಯೆ |
|---|---|---|
| 1 | 262/91-92, ದಿನಾಂಕ: 03.12.1991 | 04 |
| 2 | 355/91-92, ದಿನಾಂಕ: 22.02.1992 | 07 |
| 3 | 200/92-93, ದಿನಾಂಕ: 28.09.1992 | 30 |
| 4 | 50/93-94, ದಿನಾಂಕ: 20.05.1993 | 21 |
| 5 | 354/1993-94, ದಿನಾಂಕ: 04.02.1994 | 15 |
| | **ಒಟ್ಟು** | **77** |

| | | |
|---|---|---|
| ಆ) | ಪ್ರಥಮ ದರ್ಜೆ ಸಹಾಯಕ ವೃಂದದ ಹುದ್ದೆಗಳಿಗೆ 1994ರ ಪೂರ್ವದಲ್ಲಿ "Promotions on purely temporary basis" ಎಂದು ದ್ವಿತೀಯ ದರ್ಜೆ ಸಹಾಯಕರಿಗೆ ಮುಂಬಡ್ತಿ ನೀಡಿ ಇವರನ್ನು ಪ್ರಥಮ ದರ್ಜೆ ಸಹಾಯಕ ವೃಂದದ ಜೇಷ್ಠತಾ ಪಟ್ಟಿಯಲ್ಲಿ ಸೇರ್ಪಡೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; 1994ರ ಪೂರ್ವದಲ್ಲಿ "Promotions on purely temporary basis" ಎಂದು ಎಷ್ಟು ದ್ವಿತೀಯ ದರ್ಜೆ ಸಹಾಯಕರಿಗೆ ಮುಂಬಡ್ತಿ ನೀಡಲಾಗಿದೆ. | ಪ್ರಥಮ ದರ್ಜೆ ಸಹಾಯಕ ವೃಂದಕ್ಕೆ ಸೇರಿದ ಎಲ್ಲಾ ಸರ್ಕಾರಿ ನೌಕರರುಗಳನ್ನು ಪ್ರಧಾನ ಕಛೇರಿಯ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: A4(a)/MIS/CR-25/88-89, ದಿನಾಂಕ:20.07.1989ರಲ್ಲಿ ದಿನಾಂಕ:01.11.1956 ರಿಂದ 31.05.1986ರವರೆಗಿನ ಅವಧಿಗೆ ಹಾಗೂ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು) ರವರ ಕಛೇರಿಯ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ಬಿ4.ಸಿಬ್ಬಂದಿ-52:95-96; ದಿನಾಂಕ:22.10.2001ರಲ್ಲಿ ದಿನಾಂಕ:01.06.1986 ರಿಂದ 31.12.1999ರವರೆಗಿನ ಅವಧಿಗೆ ಸಂಬಂಧಿಸಿದಂತೆ ಪ್ರಥಮ ದರ್ಜೆ ಸಹಾಯಕ ವೃಂದದ ಜೇಷ್ಠತಾ ಪಟ್ಟಿಗಳಲ್ಲಿ ಸೇರ್ಪಡೆ ಮಾಡಲಾಗಿರುತ್ತದೆ. |
| ಇ) | ದ್ವಿತೀಯ ದರ್ಜೆ ಸಹಾಯಕರಿಗೆ 1994ರ ಪೂರ್ವದಲ್ಲಿ ಪ್ರಥಮ ದರ್ಜೆ ಸಹಾಯಕ ವೃಂದಕ್ಕೆ "Promotions on purely temporary basis" ಎಂದು ಮುಂಬಡ್ತಿಯನ್ನು ಯಾವ ನಿಯಮಗಳಡಿ ನೀಡಲಾಗಿದೆ; | ಮುಂಬಡ್ತಿ ಆದೇಶಗಳಲ್ಲಿ "Promotions on purely temporary basis" ಎಂದು ನಮೂದಿಸಿ ದ್ವಿತೀಯ ದರ್ಜೆ ಸಹಾಯಕರಿಗೆ ಪ್ರಥಮ ದರ್ಜೆ ಸಹಾಯಕ ವೃಂದಕ್ಕೆ ಮುಂಬಡ್ತಿ ನೀಡುವ ಪದ್ಧತಿಯು 1970ರ (ಅಥವಾ ಅದಕ್ಕಿಂತ ಹಿಂದಿನಿಂದಲೂ) ಸರ್ಕಾರದ ವಿವಿಧ ಇಲಾಖೆಗಳಲ್ಲಿ ಚಾಲ್ತಿಯಲ್ಲಿದ್ದಂತೆ 1994ರ ಪೂರ್ವದಲ್ಲಿ ಪ್ರಥಮ ದರ್ಜೆ ಸಹಾಯಕ ವೃಂದಕ್ಕೆ "Promotions on purely temporary basis" ಎಂದು ಮುಂಬಡ್ತಿ ನೀಡಲಾಗಿರುತ್ತದೆ. |
| ಈ) | 1994ರ ಪೂರ್ವದಲ್ಲಿ "Promotions on purely temporary basis" ಎಂದು ಮುಂಬಡ್ತಿ ಹೊಂದಿರುವ ನೌಕರರನ್ನು ಹಾಗೂ ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೇಮಕಾತಿ) ನಿಯಮಾವಳಿ, 1977ರ ನಿಯಮ 17(ಸಿ)ರನ್ವಯ ಮುಂಬಡ್ತಿ ಹೊಂದಿರುವ ನೌಕರರನ್ನು ಜೇಷ್ಠತೆಗೆ ಪರಿಗಣಿಸಲು ಕರ್ನಾಟಕ ಸಿವಿಲ್ ಸೇವಾ (ಜೇಷ್ಠತೆ) ನಿಯಮಾವಳಿ, 1957ರ ಯಾವ ನಿಯಮಗಳಡಿ ಅವಕಾಶ ಕಲ್ಪಿಸಲಾಗಿದೆ ಸಂಪೂರ್ಣ ಮಾಹಿತಿ ನೀಡುವುದು? | ಪ್ರಥಮ ದರ್ಜೆ ಸಹಾಯಕ ವೃಂದಕ್ಕೆ ಸೇರಿದ ಎಲ್ಲಾ ಸರ್ಕಾರಿ ನೌಕರರುಗಳನ್ನು ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತೆ) ನಿಯಮಾವಳಿ, 1957ರಡಿ ಪ್ರಕಟಿಸಿದ ಜ್ಯೇಷ್ಠತಾ ಪಟ್ಟಿಗಳಲ್ಲಿ ಕಡ್ಡಾಯವಾಗಿ ಸೇರಿಸಬೇಕಾಗಿರುತ್ತದೆ. |

**ಸಂಖ್ಯೆ: ಅಪಜೀ 30 ಎಫ್‌ಎನ್‌ಬಿ 2024(ಇ)**

**(ಈಶ್ವರ ಬಿ.ಖಂಡ್ರೆ)**
ಮಾನ್ಯ ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು